# ‘ದಹಿಹಂಡಿ’ಗಾಗಿ ಮಾನವ ಮಿನಾರ್



**ಮುಂಬಯಿಯಲ್ಲಿ ಆಗಸ್ಟ್ 20ರಂದು ದಹಿಹಂಡಿ ಸಂಭ್ರಮ. ಕೊರೊನಾ ಕಾರಣದಿಂದಾಗಿ ಎರಡು ವರ್ಷಗಳಿಂದ ಸ್ಥಗಿತಗೊಂಡಿದ್ದ ಆಚರಣೆಗೆ ಈ ಬಾರಿ ಸರ್ಕಾರ ಹಸಿರುನಿಶಾನೆ ತೋರಿದೆ.**

■ **ಶ್ರೀನಿವಾಸ ಜೋಕಟ್ಟೆ**

ಟಿಪಿಕಲ್ ಮರಾಠಿ ಶೈಲಿಯ ‘ಗೋವಿಂದಾ ಆಲಾರೆ...’ ಹಾಡು ಗೋಕುಲಾಷ್ಟಮಿಯ ಮರುದಿನ ಮುಂಬಯಿಯ ಗಲ್ಲಿಗಲ್ಲಿಗಳಲ್ಲಿ ಅನುರಣಿಸುತ್ತದೆ. ಕೊರೊನಾ ಕಾಲದಲ್ಲಿ ಎರಡು ವರ್ಷ ಸ್ತಬ್ಧಗೊಂಡಿದ್ದ ಈ ‘ದಹಿಹಂಡಿ’ ಉತ್ಸವಕ್ಕೆ ಈ ಸಲ ಸರ್ಕಾರದ ಅನುಮತಿ ಸಿಕ್ಕಿರುವುದರಿಂದ ಮರಾಠಿ ತರುಣರಿಗೆ ಎಲ್ಲಿಲ್ಲದ ಉತ್ಸಾಹ. ಗುರುಪೂರ್ಣಿಮೆಯ ದಿನದಿಂದ ಆರಂಭಗೊಂಡಿರುವ ‘ಮಾನವ ಮಿನಾರ್’ ಕಟ್ಟುವ ತರಬೇತಿಯ ಫಲಶ್ರುತಿ ವಿಟ್ಲಪಿಂಡಿ ದಿನ ಅನಾವರಣಗೊಳ್ಳುತ್ತದೆ.

ಅಂದು ಮುಂಬಯಿಯ ಗಲ್ಲಿ ಗಲ್ಲಿಗಳಲ್ಲಿ ಗೋವಿಂದಾ ತಂಡಗಳ ಸಂಭ್ರಮದ ಓಡಾಟ. ಅವರ ಕಣ್ಣುಗಳು ಕಟ್ಟಡದಿಂದ ಕಟ್ಟಡಕ್ಕೆ ಹಗ್ಗದಲ್ಲಿ ಕಟ್ಟಿದ ಮೊಸರಿನ ಮಡಕೆಗಳನ್ನು ಹುಡುಕುತ್ತಿರುತ್ತವೆ.

ಮಹಾರಾಷ್ಟ್ರದ ಪ್ರಮುಖ ಉತ್ಸವಗಳಲ್ಲಿ ಗಣೇಶೋತ್ಸವ ಹೊರತುಪಡಿಸಿದರೆ ಶ್ರೀಕೃಷ್ಣ ಜನ್ಮಾಷ್ಟಮಿಯ ಮರುದಿನದ ‘ದಹಿಹಂಡಿ’ಗೆ (ಮೊಸರು ಕುಡಿಕೆ) ವಿಶೇಷ ಮಹತ್ವವಿದೆ. ಮಾನವ ಪಿರಮಿಡ್ಡುಗಳ ಮೂಲಕ ವಿಟ್ಲಪಿಂಡಿ ದಿನದಂದು ಈ ಮೊಸರಿನ ಮಡಕೆಯನ್ನು ತಲುಪಿ, ಅದನ್ನು ಒಡೆಯುವ ಅಪೂರ್ವವಾದ ದೃಶ್ಯವನ್ನು ವೀಕ್ಷಿಸಲು ದೇಶ ವಿದೇಶಗಳಿಂದ ಪ್ರವಾಸಿಗರು ಆ ದಿನಗಳಲ್ಲಿ ಇಲ್ಲಿಗೆ ಬರುವುದಿದೆ.

ಹಗ್ಗದಲ್ಲಿ ಕಟ್ಟಿದ ದಹಿಹಂಡಿ ತಲುಪುವ ತನಕ ಎಂಟು–ಹತ್ತು ಸ್ತರದ ಮಾನವ ಮಿನಾರ್ ಕಟ್ಟುವವರನ್ನು ‘ಗೋವಿಂದಾ ತಂಡ’ ಎಂದು ಕರೆಯಲಾಗುತ್ತದೆ. ಇತ್ತೀಚಿನ ವರ್ಷಗಳಲ್ಲಿ ಗೋಪಿಕೆಯರ ತಂಡವೂ ಸಕ್ರಿಯವಾಗಿದೆ. ಮಹಾರಾಷ್ಟ್ರ ಸರ್ಕಾರ ‘ದಹಿಹಂಡಿ’ಗೆ ಸಾಹಸ ಕ್ರೀಡೆಯ ಮಾನ್ಯತೆಯನ್ನೂ ಘೋಷಿಸಿದೆ. ಐದು, ಏಳು, ಒಂಬತ್ತು ಸ್ತರದ ಮಾನವ ಪಿರಮಿಡ್ಡುಗಳನ್ನು ನೋಡುವುದೇ ಒಂದು ವಿಶೇಷ ಅನುಭವ. 2012ರಲ್ಲಿ 43.79 ಅಡಿ (13.35 ಮೀಟರ್) ಎತ್ತರದ ಮಾನವ ಪಿರಮಿಡ್ ರಚಿಸಿ ಮುಂಬಯಿಯ ಜೋಗೇಶ್ವರಿಯಲ್ಲಿನ ‘ಜೈ ಜವಾನ್ ಗೋವಿಂದ ಪಥಕ್ ಮಂಡಳಿ’ ಗಿನ್ನೆಸ್ ದಾಖಲೆ ರಚಿಸಿತ್ತು.

ಮಹಾರಾಷ್ಟ್ರದ ರಾಜಕೀಯ ಮುಖಂಡರು ತಮ್ಮದೇ ಆದ ಗೋವಿಂದಾ ಪ್ರತಿಷ್ಠಾನಗಳನ್ನು ಸ್ಥಾಪನೆ ಮಾಡಿದ್ದಾರೆ. ದೊಡ್ಡ ಮೊತ್ತದ ನಗದು ಬಹುಮಾನವನ್ನು ಮಾನವ ಮಿನಾರ್ ಕಟ್ಟಿ ದಹಿಹಂಡಿಯನ್ನು ತಲುಪಿದ ಗೋವಿಂದಾ ತಂಡಗಳಿಗೆ ಅಂದು ನೀಡುತ್ತಾರೆ. ಪ್ರಮುಖ ಆಯೋಜಕರು ತಮ್ಮ ‘ದಹಿಹಂಡಿ’ ಪ್ರತಿಷ್ಠಾನ ಹೆಸರಿನ ಸಮವಸ್ತ್ರಗಳನ್ನು ಗೋವಿಂದಾ ತಂಡದ ಸದಸ್ಯರಿಗೆ ನೀಡುತ್ತಾರೆ. ಕೆಲವು ಆಯೋಜಕರು ಸಿನಿಮಾ ತಾರೆಯರನ್ನು ಆ ದಿನದ ವಿಶೇಷ ಆಕರ್ಷಣೆಯಾಗಿ ಕರೆಸಿಕೊಳ್ಳುತ್ತಾರೆ.

ಹಬ್ಬದ ದಿನ ಬೆಳಗಿನಿಂದಲೇ ಗೋವಿಂದಾ ತಂಡಗಳು ವಿಶೇಷ ಬಸ್ಸು, ಲಾರಿ, ಟೆಂಪೊಗಳಲ್ಲಿ ಬ್ಯಾಂಡ್ ಬಾರಿಸುತ್ತಾ ರಸ್ತೆಗಳಲ್ಲಿ ಓಡಾಡುತ್ತಿರುತ್ತಾರೆ. ಎಲ್ಲಿ ದಹಿಹಂಡಿ ಕಟ್ಟಲಾಗಿದೆಯೋ ಅಲ್ಲಿ ತಮ್ಮ ವಾಹನ ನಿಲ್ಲಿಸುತ್ತಾರೆ ಮತ್ತು ಅದನ್ನು ಒಡೆಯಲು ಮಾನವ ಮಿನಾರ್ ಕಟ್ಟಿ ಪ್ರಯತ್ನಿಸುತ್ತಾರೆ. ಕೆಲವು ತಂಡಗಳಲ್ಲಿ ಇನ್ನೂರು ಮುನ್ನೂರು ಸದಸ್ಯರೂ ಇರುತ್ತಾರೆ. ಕೆಲವು ರಾಜಕೀಯ ಪಕ್ಷಗಳು ಹತ್ತು ಲಕ್ಷ, ಇಪ್ಪತ್ತೈದು ಲಕ್ಷ ರೂಪಾಯಿ ಬಹುಮಾನ ಇರಿಸುವ ಮೂಲಕ ಸ್ಪರ್ಧೆಗಳನ್ನು ತುರುಸುಗೊಳಿಸಿವೆ.

ದಹಿಹಂಡಿ ಉತ್ಸವದ ದಿನ ಚಿಕ್ಕ ಪುಟ್ಟ ಗೋವಿಂದಾ ತಂಡಗಳೂ ರಸ್ತೆಗಳಲ್ಲಿ ತಿರುಗಾಡುತ್ತಾ ಎಲ್ಲೆಲ್ಲಿ ‘ದಹಿಹಂಡಿ’ ಕಟ್ಟಿದ್ದಾರೋ ಅಲ್ಲೆಲ್ಲ ಪ್ರಯತ್ನ ಮಾಡುತ್ತಾರೆ. ಹೆಚ್ಚಿನವರು ಐದು ಅಥವಾ ಆರು ಸ್ತರದ ಮಾನವ ಮಿನಾರ್ ಕಟ್ಟುವುದರಲ್ಲೇ ತೃಪ್ತಿ ಪಡುತ್ತಾರೆ. ಹಾಗೂ ತಮ್ಮ ಉಪಸ್ಥಿತಿ ಮಾತ್ರ ತೋರಿಸುತ್ತಾರೆ. ಆದರೆ ಮಿನಾರ್ ಕಟ್ಟಲು ಪ್ರಯತ್ನಿಸಿದ ಪ್ರತೀ ತಂಡಕ್ಕೂ ಆಯೋಜಕರು ಟ್ರೋಫಿ, ಒಂದಿಷ್ಟು ನಗದು ನೀಡುತ್ತಾರೆ. ತಮ್ಮ ಉಪಸ್ಥಿತಿ ದಾಖಲಿಸುವುದೂ ಕೆಲವು ಗೋವಿಂದಾ ತಂಡಗಳಿಗೆ ಹೆಮ್ಮೆಯ ಸಂಗತಿ.

ಮುಂಬಯಿಯಲ್ಲಿ ನಾಲ್ಕುನೂರು, ಐನೂರು ಸದಸ್ಯರಿರುವ ದೊಡ್ಡ ದೊಡ್ಡ ಗೋವಿಂದಾ ಪಥಕ್‌ಗಳೂ ಇವೆ. ಗೋವಿಂದಾ ತಂಡದ ಸದಸ್ಯರು ಮಾನವ ಮಿನಾರ್ ಕಟ್ಟುವಾಗ ‘ದಹಿಹಂಡಿ’ ಮುಟ್ಟುವ ಪ್ರಯತ್ನದಲ್ಲಿ ಹಲವರು ಕೆಳಗೆ ಬಿದ್ದು ಗಾಯಗೊಂಡ ಉದಾಹರಣೆಗಳೂ ಇವೆ. ಹಬ್ಬದ ಮರುದಿನ ಮುಂಬಯಿಯ ಆಸ್ಪತ್ರೆಗಳಿಗೆ ಹೋದರೆ ಗೋವಿಂದಾ ತಂಡಗಳ ಅನೇಕ ಸದಸ್ಯರು ಶುಶ್ರೂಷೆ ಪಡೆಯುತ್ತಿರುವುದನ್ನು ಕಾಣಬಹುದು.

ಇತ್ತೀಚಿನ ವರ್ಷಗಳಲ್ಲಿ ಗೋವಿಂದಾ ತಂಡದ ಸದಸ್ಯರಿಗೆ ವಿಮೆ ಮಾಡಲಾಗುತ್ತಿದೆ. ಆ್ಯಂಬುಲೆನ್ಸ್, ಸೇಫ್ಟಿ ಬೆಲ್ಟ್ ಸವಲತ್ತು ಒದಗಿಸಲಾಗುತ್ತಿದೆ.

ಬಾಲಿವುಡ್ ಸಿನಿಮಾಗಳಲ್ಲಿ ‘ದಹಿಹಂಡಿ’ ಒಡೆಯುವ ದೃಶ್ಯಗಳ ಅನೇಕ ಹಾಡುಗಳು ಜನಪ್ರಿಯವಾಗಿವೆ. ಟಿಪಿಕಲ್ ಮರಾಠಿ ಶೈಲಿಯ ‘ಗೋವಿಂದಾ ಆಲಾರೆ...’ ಹಾಡು ಆ ದಿನಗಳಲ್ಲಿ ಗಲ್ಲಿಗಳ ಮೈಕ್‌ನಲ್ಲಿ ಕೇಳಿ ಬರುತ್ತವೆ.

ಕೆಲವು ಗೋವಿಂದಾ ತಂಡಗಳಲ್ಲಿ ಮುಸ್ಲಿಂ ಸದಸ್ಯರೂ ಇರುವುದು ವಿಶೇಷ.

ಪ್ರತಿಕ್ರಿಯಿಸಿ: **feedback@sudha.co.in**